# ಆದರ್ಶನ ಸಂಗಾತಿಯಾದ ಅಪೂರ್ವ

ಅವಳನ್ನು ಸಂತೈಸುವ ಪ್ರಯತ್ನ ಮಾಡಿದ. ಅವನ ಓಲೈಕೆ ಅವಳ ಮೇಲೆ ಯಾವ ಪರಿಣಾಮವೂ ಬೀರದಷ್ಟು ನೋವಾಗಿತ್ತು.

'ನನ್ನ ತಡೆಯುವ ಪ್ರಯತ್ನ ಮಾಡಬೇಡಿ ಸೂರ್ಯ.. ನನ್ನ ಕಣ್ಮುಂದೆ ನೀವು ನಿಂತರೆ.. ನನ್ಗೆ ನೀವು ಮಾಡಿದ ಕೃತ್ಯ ಇನ್ನೂ ದೊಡ್ಡ ಗಾತ್ರದಲ್ಲಿ ಕಾಣ್ಸುತ್ತೆ.. ಹಿಂಸೆಯಾಗುತ್ತೆ..! ಅದಿಕ್ಕೆ ಇಲ್ಲಿಂದ ಹೋಗ್ತಾ ಇದ್ದೀನಿ...ಅರ್ಥ ಮಾಡಿಕೊಳ್ಳಿ..' ಅವಳು ಕಂಬನಿಗರೆಯುತ್ತ ವ್ಯಥೆಯಿಂದ ನುಡಿದಾಗ ಅವಳ ಮನಸ್ಥಿತಿ ಅರ್ಥ ಮಾಡಿಕೊಂಡವನಂತೆ ಸರಿದು ಅವಳಿಗೆ ಹೋಗಲು ಅನುವು ಮಾಡಿಬಿಟ್ಟ.

ಅಪೂರ್ವ ಅಲ್ಲಿಂದ ನಿರ್ಗಮಿಸುವುದನ್ನೇ ನೋಡುತ್ತ ಎಲ್ಲರೂ ನಿಂತು ಬಿಟ್ಟರು.

* * *

ಅಪೂರ್ವ ಅಲ್ಲಿಂದ ನೊಂದ ಮನಸ್ಸಿನಿಂದ ಹೊರಟು ಬಂದಿದ್ದರೂ ಎಲ್ಲಿಗೆ ಹೋಗಬೇಕೆಂದು ತೋಚದ ಪರಿಸ್ಥಿತಿಯಲ್ಲಿ ಉಸಿರುಗಟ್ಟುವಂತಾಗಿತ್ತು. ತಾನು ಮನಸಾರೆ



ವಿಜಯಕುಮಾರಿ